**ದಿಃ06.03.2025 ರ ಆದೇಶದ ಪ್ರಕಾರ ಸಾಕ್ಷಿಯನ್ನು ಮುಂದುವರಿದ ಪಾಟೀ ಸವಾಲಿಗಾಗಿ ಪುನಃ ಕರೆಸಲಾಯಿತು.** ಸಾಕ್ಷಿಗೆ ದಿಃ**09.04.2025** ರಂದು ಪ್ರಮಾಣ ವಚನ ಭೋದಿಸಲಾಯಿತು

**ಮುಂದುವರಿದ ಪಾಟೀ ಸವಾಲುಃ 1, 2, 3 ಮತ್ತು 5 ನೇ ಆರೋಪಿತರ ಪರ ಶ್ರೀಮತಿ ಎಸ್ ಪಿ ವಕೀಲರಿಂದಃ**

11. ನನಗೆ ಆರೋಪಿತರು 2006 ರಿಂದ ಪರಿಚಯ. ಆರೋಪಿತರು ಹಾಗೂ ನಾನು ಅಕ್ಕಪಕ್ಕದ ಊರಿನವರಾದ್ದರಿಂದ ಮುಖ ಪರಿಚಯ ಇದೆ. ಘಟನೆಯು ಸರ್ವೆ ನಂಬರ್ 42 ರಲ್ಲಿ ನಡೆಯಿತು. ಸರ್ವೆ ನಂಬರ್ 42 ಇದು ಮುನಿಯಲ್ಲಪ್ಪನವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಅದು ಸೊಸೈಟಿಗೆ ಸೇರಿದ್ದು ಎಂದು ಹೇಳುತ್ತಾರೆ. ನಾನು ಸದರಿ ಸೊಸೈಟಿ ಜಮೀನುಗಳ ಉಸ್ತುವಾರಿ ನೋಡಿಕೊಳ್ಳುವುದರಿಂದ ಜಮೀನಿನ ಬಳಿ ಹೋಗಿದ್ದೆನು. ಸದರಿ ಜಮೀನುಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಕೊಟ್ಟಿದ್ದಾರೆ ಎಂದು ತೋರಿಸಲು ನಾನು ದಾಖಲಾತಿಗಳನ್ನು ಕೊಟ್ಟಿದ್ದೇನೆ. ಈ ಪ್ರಕರಣದಲ್ಲಿ ಸದರಿ ದಾಖಲಾತಿಗಳು ಹಾಜರಾಗಿದೆಯೋ ಇಲ್ಲವೋ ನನಗೆ ನೆನಪಿಲ್ಲ. ದಿಃ25.07.2016 ರಂದು ಬೆಳಗ್ಗೆ ಸುಮಾರು 11.00 ಘಂಟೆ ಸಮಯದಲ್ಲಿ ನಿಪಿ-1 ದೂರನ್ನು ಆಸ್ಪತ್ರೆಯಲ್ಲಿ ಪಡೆದರು. ಘಟನೆ ನಡೆದ ಸ್ಥಳ ಮುಖ್ಯ ರಸ್ತೆಯಿಂದ ಸುಮಾರು ಒಂದು ಕಿಮೀ ಅಂತರದಲ್ಲಿದೆ. ಅದ್ದೆ ಗ್ರಾಮದ ರಸ್ತೆಯು ಘಟನೆ ನಡೆದ ಸ್ಥಳದಿಂದ ಸುಮಾರು ಒಂದು ಕಿಮೀ ಅಂತರದಲ್ಲಿ ಇರುತ್ತದೆ.

12. ಘಟನೆ ನಡೆದ ಸ್ಥಳದಿಂದ ಯಲಹಂಕ ಆಸ್ಪತ್ರೆಯು 10 ಕಿಮೀ ದೂರದಲ್ಲಿರುತ್ತದೆ. ಅದೇ ದಿನ ಮಧ್ಯಾಹ್ನ 12 ರಿಂದ 01.00 ಘಂಟೆ ಸುಮಾರಿಗೆ ಜಯನಗರದಲ್ಲಿರುವ ರಾಮಕೃಷ್ಣ ಆಸ್ಪತ್ರೆಗೆ ದಾಖಲಾದೆನು. ನಾನು ಯಾವಾಗ ರಾಮಕೃಷ್ಣ ಆಸ್ಪತ್ರೆಯಿಂದ ಬಿಡುಗಡೆ ಆದೆನು ಎಂದು ನೆನಪಿಲ್ಲ. ಸಾಕ್ಷಿ ಮುಂದುವರಿದು ನಾಲ್ಕು ದಿನ ಸದರಿ ಆಸ್ಪತ್ರೆಯಲ್ಲಿ ಇದ್ದೆನು. ರಾಮಕೃಷ್ಣ ಆಸ್ಪತ್ರೆಗೆ ನಾನೇ ಹೋಗಿದ್ದೆನು, ನನ್ನ ಜೊತೆಗೆ ಆನಂದ್ ಮತ್ತು ಕೃಷ್ಣ ಬಂದಿದ್ದರು. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಘಟನೆಯಾಗದೇ

ಇದ್ದರೂ ಸಹ ನಾನು ಸ್ಥಳಕ್ಕೆ ಹೋಗಿ ಆರೋಪಿತರೊಂದಿಗೆ ಜಗಳವಾಡಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಸುಳ್ಳು ಸೃಷ್ಟಿ ಮಾಡಿದ್ದೇನೆ. ಆರೋಪಿತರು ನಮಗೆ ಜಾತಿ ನಿಂದನೆ ಮಾಡಿಲ್ಲ , ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ಇವುಗಳಿಂದ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ರಿಂದ 3 ಇವುಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ**</u> 4 ನೇ ಆರೋಪಿ ಪರ ಶ್ರೀ ಜೆ ಎಸ್ ಎಸ್ ವಕೀಲರಿಂದಃ 4 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

<u>**ಮರುವಿಚಾರಣೆಃ ಇಲ್ಲ**</u>

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು